**ದಿನಾಂಕ 28-09-2015 ರಂದು ಮಧ್ಯಾಹ್ನ 3.00 ಗಂಟೆಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ.ಅ&ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಇ-ಸ್ವತ್ತು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಉತ್ತರ ಕನ್ನಡ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿನ ಆಸ್ತಿಗಳಿಗೆ ವಿತರಿಸುವ ನಮೂನೆ 9, 11ಎ ಹಾಗೂ 11ಬಿ ವಿತರಿಸಲು ಇರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ನಡೆದ ಸಭೆಯ ನಡವಳಿಗಳು.**

ಹಾಜರಿದ್ದವರು:

ಪ್ರತ್ಯೇಕ ಅನುಬಂಧದಲ್ಲಿ ಲಗತ್ತಿಸಿದೆ.

ನಿರ್ದೇಶಕರು (ಪಂ.ರಾಜ್-1) ರವರು ಸಭೆಯಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳನ್ನು ಸ್ವಾಗತಿಸಿದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರು ಮಾತನಾಡುತ್ತಾ, ಇ-ಸ್ವತ್ತು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ಕೆಲವು ತೊಂದರೆಗಳು, ಸಮಸ್ಯೆಗಳು ಮತ್ತು ಗೊಂದಲಗಳಿರುವ ಬಗ್ಗೆ ಮಾನ್ಯ ಶಾಸಕರುಗಳು ಮತ್ತು ಸಚಿವರುಗಳು ವಿಧಾನ ಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಿದ್ದು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಉಡುಪಿ ಜಿಲ್ಲೆಗಳನ್ನೊಳಗೊಂಡಂತೆ ಇನ್ನಿತರೆ ಜಿಲ್ಲೆಗಳಲ್ಲಿನ ಈ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯಲು ಸಭೆ ಕರೆದಿರುವುದಾಗಿ ತಿಳಿಸಿದರು. ಹಾಗೂ ಇ-ಸ್ವತ್ತು ತತ್ರಾಂಶ ಜಾರಿಗೆ ಬರುವುದಕ್ಕೆ ಮುಂಚೆ ಖಾತಾ ದಾಖಲಿಸಲು ಹಲವಾರು ಸಮಸ್ಯೆಗಳಿದ್ದ ಕಾರಣ ಇ-ಸ್ವತ್ತು ತತ್ರಾಂಶವನ್ನು ಜಾರಿಗೆ ತರಲಾಯಿತು ಎಂದು ತಿಳಿಸಿದರು.

ಈ ಕೆಳಕಂಡ ವಿಷಯಗಳ ಬಗ್ಗೆ ಸಮಗ್ರ ಚರ್ಚೆ ನಡೆಸಿ ಈ ಕೆಳಕಂಡಂತೆ ನಿರ್ಣಯಿಸಲಾಯಿತು.

- ಅರಣ್ಯ ಅತಿಕ್ರಮಣ ಜಾಗದಲ್ಲಿ ನಮೂನೆ 11- ಬಿ ಫಾರಂ ಕೊಡಲು ಸಾಧ್ಯವಾಗುವುದಿಲ್ಲ. ಸದರಿ ಜಾಗವು ಅರಣ್ಯ ಇಲಾಖೆಗೆ ಸಂಬಂಧಪಟ್ಟಿರುತ್ತದೆಯೆ ಎಂಬುದನ್ನು ದೃಡೀಕರಿಸಿಕೊಂಡು ಈಗಾಗಲೇ ನಿಮಗೆ ತಿಳಿಸಿರುವಂತೆ ಸಂಬಂಧಪಟ್ಟ ಈ ಕೆಳಕಂಡ ನಾಲ್ಕು ದಾಖಲೆಗಳನ್ನು ಕಡ್ಡಾಯವಾಗಿ ಪಡೆದು ನಮೂನೆ-9 ಮತ್ತು 11-ಬಿಯನ್ನು ವಿತರಿಸಬಹುದಾಗಿರುತ್ತದೆ ಎಂದು ಶ್ರೀ ಸಮರ್ಥ್‌ರಾಮ್, ಪ್ರಿನ್ಸಿಪಲ್ ಸಿಸ್ಟಮ್ ಅನಾಲಿಸ್ಟ್ ರವರು ತಿಳಿಸಿದರು.
  1. ಆರ್. ಟಿ.ಸಿ. 2. ಭೂ ಪರಿವರ್ತನಾ ಆದೇಶ 3. ಹಿಂಬರಹ (ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಅನ್ವಯಿಸುತ್ತದೆ) ಮತ್ತು 4) ಫಾರಂ ಹೌಸ್ ಬಗ್ಗೆ ದೃಢೀಕರಣ
- ದಿನಾಂಕ:11-11-2014 ರ ಸರ್ಕಾರದ ಪತ್ರದಲ್ಲಿ ಸ್ಥಳೀಯ ಯೋಜನಾ ಪ್ರದೇಶದ ಹೊರಭಾಗದಲ್ಲಿನ ಭೂ ಪರಿವರ್ತಿತ ಜಮೀನುಗಳಿಗೆ ಲೇಔಟ್ ಅನುಮೋದನೆ ನೀಡಲು ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳು ಅನುಸರಿಸಬೇಕಾದ ಮಾರ್ಗಸೂಚಿಯಲ್ಲಿ 1-00 ಎಕರೆಗಿಂತ ಕಡಿಮೆ ವಿಸ್ತೀರ್ಣದ ಲೇಔಟ್ ನಕ್ಷೆಗೆ ಯಾರು ಅನುಮೋದನೆ ನೀಡಬೇಕು ಎಂಬುವುದರ ಬಗ್ಗೆ ಅವಕಾಶ ಕಲ್ಪಿಸಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿಗಳು, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದರು. ಸಮಗ್ರ ಚರ್ಚೆಯ ನಂತರ ಈ ಬಗ್ಗೆ ಪಂಚಾಯಿತಿ ರಾಜ್ ಇಂಜಿನಿಯರಿಂಗ್ ಇಲಾಖೆಯ ಇಂಜಿನಿರಯರ್‌ಗಳು ಅನುಮೋದನೆ ನೀಡಲು ಕ್ರಮವಹಿಸಲು ತಿಳಿಸಲಾಯಿತು.

- ವೈಯಕ್ತಿಕ ಮನೆಗಳಲ್ಲಿ ಮಹಡಿಗಳನ್ನು ಬೇರೆ ಬೇರೆ ಮಾಲೀಕರಿಗೆ ವಿಭಜನೆ ಮಾಡುವ ಬಗ್ಗೆ ಚರ್ಚಿಸಲಾಗಿ ಅಪಾರ್ಟ್‌ಮೆಂಟ್ ರೀತಿಯಲ್ಲಿಯೇ ಇದನ್ನು ನಿರ್ವಹಿಸುವುದು ಹಾಗೂ ಅಪಾರ್ಟ್‌ಮೆಂಟ್ ಅನುಮೋದನೆ ರೀತಿ ದಾಖಲೆಗಳನ್ನು ಒದಗಿಸುವ ಬಗ್ಗೆ ವಿನಾಯಿತಿ ನೀಡುವುದು. ಇದೇ ವಿನಾಯಿತಿಯನ್ನು ವೈಯಕ್ತಿಕ ಕಟ್ಟಡಗಳಲ್ಲಿ ನಿರ್ಮಿಸಿರುವ ವಾಣಿಜ್ಯ ಮಳಿಗೆಗಳಿಗೂ ಅನ್ವಯವಾಗುವಂತೆ ಇ–ಸ್ವತ್ತು ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲು ಎನ್.ಐ.ಸಿ. ರವರಿಗೆ ತಿಳಿಸಲಾಯಿತು.
- ಗ್ರಾಮಠಾಣಾ ಸ್ಕೆಚ್‌ಗೆ ಸಂಬಂಧಿಸಿದಂತೆ ನಾಗರೀಕ ಸೇವೆಯನ್ನು ನೀಡಲು ಸಕಾಲ ಕಾಯ್ದೆಯಡಿ ಸೇರಿಸಲು ಕಂದಾಯ ಇಲಾಖೆಗೆ ತಿಳಿಸುವಂತೆ ತೀರ್ಮಾನಿಸಲಾಯಿತು.
- ಕರಾವಳಿ ನಿಯಂತ್ರಣ ವಲಯ (C.R.Z) ವ್ಯಾಪ್ತಿಯ ಆಸ್ತಿಗಳಿಗೆ ಸಂಬಂಧಸಿದಂತೆ, ನಮೂನೆ–9 ಮತ್ತು 11ಬಿ ಯನ್ನು ನೀಡಲು ಕರಾವಳಿ ನಿಯಂತ್ರಣ ವಲಯದ ಅನುಮತಿ ಪಡೆದು ವಿತರಿಸುವಂತೆ ತಿಳಿಸಲಾಯಿತು.
- ಉಪ ನೊಂದಣಾಧಿಕಾರಿ ಕಛೇರಿಯಲ್ಲಿ ಆಸ್ತಿಗಳ ವ್ಯವಹರಣೆಯನ್ನು ಸಿಂಗಲ್ ವಿಂಡೋ ಸಿಸ್ಟಮ್ (Single window system) ರಡಿ ಅವಕಾಶ ಕಲ್ಪಿಸಲು ತಿಳಿಸಲಾಯಿತು.
- ಖಾಸಗಿಯವರು ಅಭಿವೃದ್ಧಿಪಡಿಸಿರುವ ಲೇಔಟ್‌ಗಳಲ್ಲಿ ನಾಗರೀಕ ನಿವೇಶನಗಳನ್ನು ಗ್ರಾಮ ಪಂಚಾಯಿತಿಗಳು ಪಡೆಯಲು ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಹಣ ಪಾವತಿಸಿ, ಗ್ರಾಮ ಪಂಚಾಯಿತಿ ಹೆಸರಿಗೆ ನೊಂದಣಿ ಮಾಡಬೇಕಾಗಿರುತ್ತದೆ. **ಉಚಿತವಾಗಿ ನಾಗರೀಕ ನಿವೇಶನಗಳನ್ನು ಗ್ರಾಮ ಪಂಚಾಯಿತಿಗಳು ಪಡೆಯಲು ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ ಗ್ರಾಮ ಪಂಚಾಯಿತಿಯ, ಪಂಚಾಯಿತಿ ಅಭಿವೃದ್ದಿ ಅಧಿಕಾರಿ ರವರು ಪಡೆಯಲು** ಕ್ರಮ ವಹಿಸುವಂತೆ ತೀರ್ಮಾನಿಸಲಾಯಿತು.
- ಉತ್ತರ ಕನ್ನಡ ಜಿಲ್ಲೆಯಲ್ಲಿ ನಿಯಮಾನುಸಾರ ಹಾಗೂ ದಾಖಲೆ ಇರುವ ಆಸ್ತಿಗಳಿಗೆ ನಮೂನೆ 9 ಮತ್ತು 11 ಎ ನೀಡಲು, ಈಗಾಗಲೇ ದಿನಾಂಕ: 14–06–2013 ಕ್ಕಿಂತ ಹಿಂದೆ ಪಂಚತಂತ್ರ ತಂತ್ರಾಂಶದಲ್ಲಿ ದಾಖಲಿಸಿರುವ ಆಸ್ತಿಗಳಿಗೆ ಈ ಕೆಳಕಂಡ ದಾಖಲೆಗಳನ್ನು ಹೊರತುಪಡಿಸಿ, ಈ ಉದ್ದೇಶಕ್ಕಾಗಿ ಮಾತ್ರ ಎಂದು ಉದಾ: ವಸತಿ ಯೋಜನೆಯಡಿ ಮನೆ ನಿರ್ಮಿಸಿಕೊಳ್ಳಲು ಮಾತ್ರವೆಂದು ನಮೂದಿಸಿ, ನಮೂನೆ 11 ಬಿ ನೀಡಲು ಹಾಗೂ ಈ ಆಸ್ತಿಗಳನ್ನು ಮಾರಾಟ ಮಾಡಲು ಅವಕಾಶವಿರುವುದಿಲ್ಲವೆಂದು ತೀರ್ಮಾನಿಸಲಾಯಿತು.

  1. ಆರ್. ಟಿ.ಸಿ. 2. ಭೂ ಪರಿವರ್ತನಾ ಆದೇಶ 3. ಹಿಂಬರಹ (ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಮಾತ್ರ ಅನ್ವಯಿಸುತ್ತದೆ) ಮತ್ತು 4) ಫಾರಂ ಹೌಸ್ ಬಗ್ಗೆ ದೃಢೀಕರಣ

ವಿಶೇಷ ರಿಯಾಯತಿ ಪಡೆದ ಆಸ್ತಿಗಳಲ್ಲಿ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗೆ ವಿನಾಯಿತಿ ನೀಡುವ ಬಗ್ಗೆ ನಿರ್ಣಯಿಸಲಾಯಿತು.

ನಿರ್ದೇಶಕರು (ಪಂ.ರಾಜ್) ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ: ಎನ್. ನಾಗಾಂಬಿಕಾ ದೇವಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್),
ಗ್ರಾ.ಅ&ಪಂ.ರಾಜ್ ಇಲಾಖೆ.